**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 101/2018**

| | | | |
|---|---|---|---|
| **ಹೆಸರು** | **:** | **ಪ್ರದೀಪ ಕೊಳ್ಳ** | **ಚಾ.ಸಾ.22** |
| **ತಂದೆಯ ಹೆಸರು** | **:** | **ಲಕ್ಷ್ಮಣರಾವ್ ಕೊಳ್ಳ** | **ಪ್ರಾ.ಸಾ.18** |
| **ವಯಸ್ಸು** | **:** | **59 ವರ್ಷ** | **ದಿನಾಂಕಃ 11-01-2024** |
| **ಉದ್ಯೋಗ** | **:** | **ಪೊಲೀಸ ಇನ್ಸಪೇಕ್ಟರ ಲೋಕಾಯುಕ್ತ** | |
| **ವಾಸಸ್ಥಳ** | **:** | **ಬೀದರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 4-08-2016 ರಿಂದ 13-11-2017 ರವರೆಗೆ ಸುಲೇಪೇಟ ಪೊಲೀಸ ಠಾಣೆಯಲ್ಲಿ ಪಿ.ಎಸ.ಐ ಆಗಿ ಕಾರ್ಯನಿರ್ವಹಿಸಿದೇನೆ.

ದಿನಾಂಕ: 12-10-2017 ರಂದು ಸಾಯಂಕಾಲ 6.30 ಗಂಟೆಗೆ ಪ್ರಾಸಾ-15 ರವರು ತನ್ನ ತಂಗಿಯಾದ ಪ್ರಾಸಾ-3 ರವರ ದೂರನ್ನು ತಂದು ಹಾಜರು ಪಡಿಸಿದ್ದು ಸದರಿ ದೂರಿನ ಸಾರಾಂಶದ ಮೇರೆಗೆ ಠಾಣಾ ಗುನ್ನಾ ಸಂಖ್ಯೆ 165/2017 ರಲ್ಲಿ ಪ್ರಥಮ.ವ.ವ ದಾಖಲಿಸಿದ್ದೇನೆ. ನಿಪಿ-3 ರಲ್ಲಿರುವ ನನ್ನ ಸಹಿಯನ್ನು ನಿಪಿ-3(ಸಿ)ಎಂದು ಗುರುತಿಸಲಾಯಿತು. ಮತ್ತು ಪ್ರ.ವ.ವಯನ್ನು ನಿಪಿ-13 ಎಂದು ಗುರುತಿಸಲಾಯಿತು.

ದಿನಾಂಕ 13-10-2017 ರಂದು ಬೆಳಗ್ಗೆ 9 ರಿಂದ 10 ಗಂಟೆವರೆಗೆ ರುದ್ರನೂರು ಗ್ರಾಮದ ಪ್ರಾಸಾ-3 ರವರ ಗಂಡನ ಮನೆಯಲ್ಲಿ ಪ್ರಾಸಾ-15 ರವರು ತೋರಿಸಿದಂತೆ ಪ್ರಾಸಾ-17 ಮತ್ತು ಚಾಸಾ-18 ರವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ. ಈಗ ನೋಡುತ್ತಿರುವ ನಿಪಿ-12 ರ ಪಂಚನಾಮೆಯಲ್ಲಿರುವ ಸಹಿ ನನ್ನದೆ. ನನ್ನ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು. ಅದೇ ಸಮಯಕ್ಕೆ ನಿಪಿ-11 ರ ಭಾವಚಿತ್ರವನ್ನು ಪಡೆದಿದ್ದೇನೆ. ಅದೇ ದಿನ ಚಾಸಾ-2 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

ಅದೇ ದಿನ ಬೆಳಗ್ಗೆ 11.30 ರಿಂದ 12.30 ರವರೆಗೆ ರಾಯಕೋಡ ಗ್ರಾಮದ ಪ್ರಾಸಾ-ರವರ ಮನೆ ಮುಂದೆ ಪಡಸಾಲೇಯಲ್ಲಿ ಪ್ರಾಸಾ-3 ರವರರಿಂದ ಒಂದು ಕೆಂಪು ಮತ್ತು ನೀಲಿ ಬಣ್ಣದ

ಒಡಣೆಯನ್ನು ಪ್ರಾಸಾ-12 ಮತ್ತು 13 ರವರ ಸಮಕ್ಷಮ ಜಪ್ತಿ ಮಾಡಿ ಜಪ್ತಿ ಪಂಚನಾಮೆಯನ್ನು ಬರೆದಿರುತ್ತೇನೆ. ನಿಪಿ-8 ರ ಜಪ್ತಿ ಪಂಚನಾಮೆಯಲ್ಲಿರುವ ನನ್ನ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ನಿಪಿ-4 ರ ಭಾವಚಿತ್ರವನ್ನು ಅದೇ ಸಮಯಕ್ಕೆ ಪಡೆದುಕೊಂಡಿದ್ದೇನೆ. ಆ ಸಮಯಕ್ಕೆ ಜಪ್ತಿ ಮಾಡಲಾದ ಒಡಣೆ ಈ ದಿನ ನ್ಯಾಯಾಲಯದ ಮುಂದೆ ಇದೆ ಅದನ್ನು ಈಗಾಗಾಲೇ ಮು.ಮಾ-1 ಎಂದು ಗುರುತಿಸಲಾಗಿದೆ. ಅದೇ ಸಮಯಕ್ಕೆ ಪ್ರಾಸಾ-3 ರವರ ಪುನರ ಹೇಳಿಕೆ ಸಹ ಪಡೆದುಕೊಂಡಿದ್ದೇನೆ.

ಸದರಿ ಪ್ರಕರಣ ಘೋರ ಅಪರಾಧವಾದ ಕಾರಣ ಮುಂದಿನ ತನಿಖೆಗಾಗಿ ಪ್ರಕರಣವನ್ನು ಪ್ರಾಸಾ-16 ರವರಿಗೆ ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಬಿ.ಕೆ ವಕೀಲರಿಂದಃ-**

ವರದಕ್ಷಿಣೆ ನಿಷೇದ ಕಾನೂನು 1956 ರಲ್ಲಿ ಜಾರಿಯಾಗಿದೆ. ಸಾಮಾನ್ಯವಾಗಿ ನನಗೆ ಅರ್ಜಿ ಬಂದಾಗ ಅದನ್ನು ಓದಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ ಎಂದರೆ ಸರಿ. ಈ ಪ್ರಕರಣದಲ್ಲಿ ನೇರವಾಗಿ ಪ್ರಾಸಾ-3 ರವರ ದೂರು ನೀಡಲು ಬಂದಿಲ್ಲ ಎಂದರೆ ಸರಿ. ನಿಪಿ-3 ರ ದೂರಿನಲ್ಲಿ ಮದುವೆ ಸಮಯದಲ್ಲಿ ನನ್ನ ತಂದೆ ತಾಯಿ 2 ಲಕ್ಷ ನಗದು ಹಣ ಮತ್ತು 6 ತೋಲೆ ಬಂಗಾರ ಹಾಗೂ ಇತರೆ ಮನೆ ಸಾಮಾನುಗಳನ್ನು ವರದಕ್ಷಿಣೆ ರೂಪದಲ್ಲಿ ಕೊಟ್ಟು ಮದುವೆ ಮಾಡಿಕೊಟ್ಟಿರುತ್ತಾರೆ ಎಂದು ಉಲ್ಲೇಖವಿರುತ್ತದೆ ಎಂದರೆ ಸರಿ. ಸದರಿ ಉಲ್ಲೇಖವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಮಾನ್ಯವಾಗಿ ವರದಕ್ಷಿಣೆ ಕೋಡುವವರ ಮೇಲೆ ಮತ್ತು ತೆಗೆದುಕೊಳ್ಳುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದರೆ ಸರಿ. ಈ ಪ್ರಕರಣದಲ್ಲಿ ವರದಕ್ಷಿಣೆ ಕೊಟ್ಟವರ ವಿರುದ್ದ ಯಾವುದೇ ಪ್ರಕರಣ ದಾಖಲಿಸಿಲ್ಲ. ಸಾಕ್ಷಿ ಮುಂದುವರೆದು ನನ್ನ ಮೇಲಾಧಿಕಾರಿಗಳು ಆದೇಶ ಮಾಡಿದರೆ ಮಾತ್ರ ಕ್ರಮ ಕೈಗೊಳ್ಳಬಹುದು ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಪ್ರ.ವ.ವ. ನಕಲನ್ನು ನನ್ನ ಮೇಲಾಧಿಕಾರಿಗಳಿಗೆ ಸಲ್ಲಿಸುತ್ತೇವೆ ಎಂದರೆ ಸರಿ. ಸಾಮಾನ್ಯವಾಗಿ ದೂರು ಸಲ್ಲಿಸಿದಾಗ ಅದರ ಬಗ್ಗೆ ನನ್ನ ಮೇಲಾಧಿಕಾರಿಗಳಿಗೆ ಮಾಹಿತಿ ನೀಡುತ್ತೇನೆ ಎಂದರೆ ಸರಿ. ವರದಕ್ಷಿಣೆ ಕೊಟ್ಟವರ ವಿರುದ್ದ ಕ್ರಮಕೈಗೊಳ್ಳಬೇಕಾಗುತ್ತದೆ ಎಂದು ದೂರುದಾರರಿಗೆ ಹೇಳಿದ್ದೇನೆ. ನನ್ನ ಮೇಲಾಧಿಕಾರಿಗಳು ದೋಷಾರೋಪಣ ಪತ್ರ ಸಲ್ಲಿಸುವ ಮುಂಚೆ ವರದಕ್ಷಿಣೆ ಕೊಟ್ಟವರ ವಿರುದ್ದ ಕ್ರಮಕೈಗೊಳ್ಳಲು ನನಗೆ ತಿಳಿಸಿರುವುದಿಲ್ಲ. ಪ್ರಾಸಾ-15 ರವರಿಗೆ ತಮ್ಮ ತಂಗಿಯ ಪ್ರಕರಣದಲ್ಲಿ ಸಹಾಯ ಮಾಡಬೇಕೆಂದು ಸುಳ್ಳು ಪ್ರ.ವ.ವ. ಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ದೂರು ನೀಡುವ ಹಿಂದಿನ ದಿನ ಆರೋಪಿ ತಮಗೆ ಪ್ರಾಸಾ-3 ಮತ್ತು ಪ್ರಾಸಾ-15 ರವರು ಸೇರಿ ಹೊಡೆದಿದ್ದಾರೆ ಎಂದು ದೂರು ನೀಡಲು ನಮ್ಮ ಠಾಣೆಗೆ ಬಂದಿದ್ದರು ಎಂದರೆ ಸರಿಯಲ್ಲ. ಅದರಲ್ಲಿ ನಾನೇ ಮಧ್ಯಸ್ಥಿಕೆ ಮಾಡಿ ಹಾಗೂ ರಾಜೀ ಮಾಡಿ ಮರಳಿ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಕಳುಹಿಸಿ ನಂತರ ಪ್ರಾಸಾ-15 ರವರಿಗೆ ಠಾಣೆಗೆ ಕರೆಸಿ ಪ್ರ.ವ.ವ.ಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 17-10-2017 ರಂದು ನಾನು ಪ್ರಾಸಾ-3 ರವರಿಗೆ ಬೇಟಿಯಾಗಿರುತ್ತೇನೆ. ನಾನು ಹೋದಾಗ ಪ್ರಾಸಾ-3 ರವರು ರಾಯಕೋಡದಲ್ಲಿರುವ ತಮ್ಮ ತಂದೆ ತಾಯಿ ಮನೆಯಲ್ಲಿದ್ದರು. ನಾನು ಹೋದಾಗ ಪ್ರಾಸಾ-3 ರವರ ಪರಿಸ್ದಿತಿ ಹೇಗೆ ಇತ್ತು ಎಂದು ಪ್ರಶ್ನಿಸಿದಾಗ ಸಾಕ್ಷಿ ಅವಳು ದುಃಖಿತಳಾಗಿದ್ದಳು ಎಂದು ನುಡಿಯುತ್ತಾರೆ. ಅವಳು ಆಗ ಮಾತನಾಡುವ ಹಾಗೂ ಓಡಾಡುವ ಪರಿಸ್ಥಿಯಲ್ಲಿದ್ದಳು.

ಪ್ರಾಸಾ-3 ರವರು ಠಾಣೆಗೆ ಬಂದು ಏಕೆ ದೂರು ನೀಡಿಲ್ಲ ಎಂದು ನಾನು ಅವಳಿಗೆ ಪ್ರಶ್ನಿಸಿದ್ದೇನೆ. ಆಗ ಅವಳು ತನ್ನ ಆರೋಗ್ಯ ಸರಿಯಿಲ್ಲದಿರುವ ಕಾರಣ ಬಂದಿಲ್ಲ ಎಂದು ನುಡಿಯುತ್ತಾರೆ. ಪ್ರಾಸಾ-3 ರವರು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರೆ ಅಥವಾ ಆರೋಪಿ ಪ್ರಾಸಾ-3 ರವರಿಗೆ ಒಡಣೆಯಿಂದ ಹೊಡೆಯಲು ಪ್ರಯತ್ನಿಸಿದರೆ ಅವಳು ಮನೆಯಲ್ಲಿ ಇರಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ಅವಳ ಪರಿಸ್ಥಿಯ ಮೇಲೆ ನಿರ್ಬರ ಇರುತ್ತದೆ ಎಂದು ನುಡಿಯುತ್ತಾರೆ. ಪ್ರಾಸಾ-3 ರವರಿರು ವಿದ್ಯಾವಂತಳು ಎಂದರೆ ಸರಿ. ನಾನು ತನಿಖೆ ಮಾಡಲು ಹೋದಾಗ ಪ್ರಾಸಾ-3 ರವರು 108 ಗೆ ಕರೆ ಮಾಡಿರುವ ಬಗ್ಗೆ ಪ್ರಶ್ನಿಸಿಲ್ಲ.

ಪ್ರಾಸಾ-3 ರವರು ಸೇಡಂ ಆಸ್ಪತ್ರೆಗೆ ಹೋಗಿದ್ದರು ಎಂದು ನನಗೆ ತಿಳಿಸಿರುವುದಿಲ್ಲ. ಪ್ರಾಸಾ-3 ರವರು ಚನ್ನಾಗಿಯೇ ಇದ್ದರು ಸಹ ಪ್ರಾಸಾ-15 ರವರ ಮಾತು ಕೇಳಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಕಾನೂನು ಬಾಹಿರವಾಗಿ ಕಾರ್ಯಮಾಡಿದ್ದೇನೆ ಎಂದರೆ ಸರಿಯಲ್ಲ.

**(ಮುಂದಿನ ಪಾಟೀ ಸವಾಲಿಗೆ ಆರೋಪಿತರ ಪರ ವಕೀಲರು ಮಧ್ಯಾಹ್ನ 3 ಗಂಟೆಗೆ ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದಿನ ಪಾಟೀ ಸವಾಲು ಮಧ್ಯಾಹ್ನ 3 ಗಂಟೆಗೆ ಮುಂದುಡಲಾಯಿತು.)**

**ಸಾಕ್ಷಿಗೆ ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಬಿ.ಕೆ ವಕೀಲರಿಂದಃ-**

ವರದಕ್ಷಿಣೆ ಕಾಯಿದೆಯಡಿಯಲ್ಲಿ ತನಿಖೆ ಮಾಡಲು ನನಗೆ ಅಧಿಕಾರ ಇದೆ ಎಂದರೆ ಸರಿಯಲ್ಲ.

ಸಾಕ್ಷಿ ಮುಂದುವರೆದು ವೃತ್ತ ನಿರೀಕ್ಷಕರಿಗೆ ಅಧಿಕಾರವಿದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ವರದಕ್ಷಿಣೆ ಕಾಯಿದೆಯಲ್ಲಿ ಪ್ರಕರಣ ದಾಖಲಿಸಿದಾಗ ಪೂರ್ಣ ತನಿಖೆ ವೃತ್ತ ನೀರಿಕ್ಷಕರೆ ಮಾಡಬೇಕು ಎಂದರೆ ಸರಿ. ಪ್ರಾಸಾ-16 ರವರಿಗೆ ಕಡತ ಕೊಟ್ಟ ಬಗ್ಗೆ ಲಿಖಿತವಾದ ದಾಖಲೆ ನನ್ನ ಅಂತಿಮ ವರದಿಯಲ್ಲಿ ಇಲ್ಲ. ಸಾಕ್ಷಿ ಮುಂದುವರೆದು ಕೇಸ್ ಡೈರಿಯಲ್ಲಿ ಉಲ್ಲೇಖವಿದೆ ಎಂದು ನುಡಿಯುತ್ತಾರೆ. ಪಂಚನಾಮೆ ಹಾಗೂ ಹೇಳಿಕೆಗಳನ್ನು ಈ ಪ್ರಕರಣದಲ್ಲಿ ನಾನೇ ಪಡೆದುಕೊಂಡಿದ್ದೇನೆ ಎಂದರೆ ಸರಿ. ಪಂಚನಾಮೆ ಹಾಗೂ ಹೇಳಿಕೆಯನ್ನು ಪಡೆದುಕೊಳ್ಳಲು ನನಗೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದರೆ ಸಾಕ್ಷಿ ಆ ಸಮಯಕ್ಕೆ ವೃತ್ತ ನಿರೀಕ್ಷಕರು ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಪಂಚನಾಮೆ ಹಾಗೂ ಹೇಳಿಕೆಗಳಲ್ಲಿ ಉಲ್ಲೇಖವಿಲ್ಲ.

ನನ್ನ ಅಣ್ಣನ ಕೈಯಲ್ಲಿ ದೂರನ್ನು ಕೊಟ್ಟು ಕಳುಹಿಸುತ್ತಿದ್ದೇನೆ ಎಂದು ದೂರಿನಲ್ಲಿ ಉಲ್ಲೇಖವಿರುತ್ತದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಉಲ್ಲೇಖವಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಪ್ರ.ವ.ವ. ಉಲ್ಲೇಖವಿದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಅವಳ ಅಣ್ಣ ತನ್ನ ತಂಗಿಯ ದೂರನ್ನು ಹಾಜರು ಪಡಿಸಿರುವ ಬಗ್ಗೆ ಉಲ್ಲೇಖ ಮಾಡಿ ಸಹಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ಪ್ರ.ವ.ವ.ಯಲ್ಲೂ ಸಹ ಉಲ್ಲೇಖವಿದೆ ಎಂದು ನುಡಿಯುತ್ತಾರೆ.

ಪ್ರಾಸಾ-3 ರವರು ನನ್ನ ಮುಂದೆ ಹೇಳಿಕೆ ನೀಡಿರುವ ಪ್ರಕಾರ ಅವರೇ ನೇಣು ಹಾಕೊಂಡಿದ್ದಾರೆ ಎಂದು ಉಲ್ಲೇಖವಿದೆ ಎಂದರೆ ಸರಿ. ಸಾಮಾನ್ಯವಾಗಿ ಆತ್ಮಹತ್ಯೆ ಪ್ರಯತ್ನ ಮಾಡುವವರ ವಿರುದ್ದ ಸಹ ಪ್ರಕರಣ ದಾಖಲಾಗುತ್ತದೆ ಎಂದರೆ ಸಾಕ್ಷಿ ಸದರಿ ಕಾನೂನು ಈಗ ರದ್ದು ಆಗಿರುತ್ತದೆ ಎಂದು ನುಡಿಯುತ್ತಾರೆ. ಯಾವಾಗ ರದ್ದು ಆಗಿದೆ ಎಂದು ನನಗೆ ನೆನಪಿಲ್ಲ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದೂರು ನೀಡುವ ಮೂರು ದಿನ ಹಿಂದೆ ಆರೋಪಿತರು ಹಾಗೂ ಪ್ರಾಸಾ-3 ರವರ ಮಧ್ಯ ಮಧ್ಯಸ್ಥಿಕೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವರದಕ್ಷಿಣೆ ನಿಷೇದ ಕಾಯಿದೆಯಡಿ ಮು.ಮಾ-1 ನ್ನು ಜಪ್ತಿ ಮಾಡಿದ್ದೇನೆ. ಮು.ಮಾ-1 ನ್ನು ವರದಕ್ಷಿಣೆ ನಿಷೇದ ಕಾಯಿದೆಯಡಿ ಜಪ್ತಿ ಮಾಡಲು ಬರುವುದಿಲ್ಲ ಮತ್ತು ವರದಕ್ಷಿಣೆ ಕೊಟ್ಟ ವಸ್ತುಗಳು ಜಪ್ತಿ ಮಾಡಬೇಕು ಎಂದರೆ ಸಾಕ್ಷಿ ಅದರ ತನಿಖೆ ನನ್ನ ಮೇಲಾಧಿಕಾರಿಗಳು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಮು.ಮಾ-1 ನ್ನು ಜಪ್ತಿ ಮಾಡಲು ನನಗೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದರೆ ಸಾಕ್ಷಿ ಆ ಸಮಯಕ್ಕೆ ವೃತ್ತ ನಿರೀಕ್ಷಕರು ಇಲ್ಲದೆ ಇರುವ ಕಾರಣ ನಾನು ಮಾಡಿದ್ದೇನೆ ಎಂದು ನುಡಿಯುತ್ತಾರೆ.

ಪ್ರಾಸಾ-3 ರವರು ತಮ್ಮ ಹೇಳಿಕೆಯಲ್ಲಿ ಆಗ ನನ್ನ ಗಂಡ ಸಂಬಂಧಿಕನಾದ ಅಂಬರೀಶ್ ತಂದೆ

ತೋಟಯ್ಯರವರು ಇವರು ದ್ವಿ ಚಕ್ರ ವಾಹನ ತೆಗೆದುಕೊಂಡು ನಮ್ಮೂರಿಗೆ ಹೊಗಿ ನನ್ನ ತಾಯಿ ಮತ್ತು ಚಿಕ್ಕಮ್ಮನನ್ನು ಕರೆದುಕೊಂಡು ರುದ್ರನೂರು ಗ್ರಾಮಕ್ಕೆ ಬಂದಾಗ ರುದ್ರನೂರ ಗ್ರಾಮದಿಂದ ನನಗೆ ಉಪಚಾರ ಕುರಿತು ಸೇಡಂ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಕೆ ಮಾಡಿರುತ್ತಾರೆ ಎಂದು ಒಗೇರೆ ದೂರನ್ನು ಬರೆದು ಆ ದೂರನ್ನು ನನ್ನ ಅಣ್ಣನಾದ ಶಿವಾನಂದನ ಕೈಯಲ್ಲಿ ಕೊಟ್ಟು ಪ್ರಕರಣ ದಾಖಲಿಸಲು ಸುಲೇಪೇಟ ಠಾಣೆಗೆ ಕಳುಹಿಸಿದ್ದು ನಿಜವಿರುತ್ತದೆ ಎಂದು ಉಲ್ಲೇಖವಿರುತ್ತದೆ ಎಂದರೆ ಸರಿ. ಈ ರೀತಿ ಪ್ರಾಸಾ-3 ರವರ ಅಣ್ಣ ಹಾಜರು ಪಡಿಸಿದ ದೂರಿನಲ್ಲಿ ಉಲ್ಲೇಖವಿಲ್ಲ.

ನಾನು ಸರಿಯಾರಿ ಪ್ರ.ವ.ವ ದಾಖಲಿಸದೆ ಪ್ರಾಸಾ-3 ರವರ ಅಣ್ಣನ ಮಾತು ಕೇಳಿ ಸುಳ್ಳು ಪ್ರ.ವ.ವ ಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಮ್ಮ ಠಾಣೆಗೆ ಬಂದಾಗ ಅವರ ವಿಚಾರಗಳನ್ನು ಕೇಳಿ ಮಧ್ಯಸ್ಥಿಕೆ ಮಾಡಬೇಕು ಎಂದರೆ ಸರಿ. 2014 ರಿಂದ ಆರೋಪಿ ಎಸ್.ಡಿ.ಎ ಆಗಿ ಸರಕಾರಿ ನೌಕರ ಇರುತ್ತಾನೆ ಎಂದರೆ ಸರಿ. ದೂರು ನೀಡಲು ಬಂದಾಗ ಸರಕಾರಿ ನೌಕರ ವರದಕ್ಷಿಣೆ ಪಡೆಯುವ ಪ್ರಸಂಗ ಬರುವುದಿಲ್ಲ ಎಂದು ತಿಳಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ತಿಳಿಸಿದ್ದೇನೆ ಆದರೆ ಅವರು ಲಿಖಿತ ದೂರನ್ನು ನೀಡಿದ ಕಾರಣ ಪ್ರ.ವ.ವ ದಾಖಲಿಸಬೇಕು ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**